ಮನೆಯವರು ವಾಪಸ್ಸು ಕಳುಹಿಸುತ್ತಿರಲಿಲ್ಲ! ಸಂಜೆಗೆ ಕೆಲಸ ಮುಗಿಸಿ ಮರಳುವಾಗ ಅವರ ಬೆವರು ತಂಪಾಗುವಂತೆ ಒಂದೇ ಅಳತೆಯಲ್ಲಿ ಮನೆಯಲ್ಲಿದ್ದ ರಾಗಿಯನ್ನೋ ಅಥವಾ ಅಕ್ಕಿಯನ್ನೋ ಕೊಡುತ್ತಿದ್ದರು. ಇಲ್ಲೂ ಕೂಡ ಹಾಗೆಯೇ ಹಣದ ರೂಪದಲ್ಲಿ ಅವರಿಗೆ ಕೂಲಿ ಕೊಡುತ್ತಿರಲಿಲ್ಲ! ಎಲ್ಲವೂ ದವಸದ ರೂಪದಲ್ಲಿಯೇ ಹೋಗುತ್ತಿತ್ತು. ಊರಿನಲ್ಲಿದ್ದ ಎಷ್ಟೋ ಜನ ಬಾಣಂತಿಯರ ಮನೆಗೂ ಇಲ್ಲಿಂದಲೇ ಅಕ್ಕಿ, ರಾಗಿ ಹೋಗುತ್ತಿತ್ತು ಎಂದು ಮಹಿಳೆಯರು ಹೇಳುತ್ತಾರೆ. ಮಕ್ಕಳಿಗೆ ಹಾಲಿಲ್ಲವೆಂದರೆ ಕೂಡಲೇ ಅವರು ಸಾತೆಮ್ಮನ ಮನೆಗೆ ಹೋಗಿ ಹಾಲು ತರುತ್ತಿದ್ದರು. ತೀರಾ ಬಡವರಾಗಿದ್ದರೆ, ಮಧ್ಯಾಹ್ನದ ಊಟದ ಹೊತ್ತಿಗೆ ಅಲ್ಲಿಗೆ ಹೋಗುತ್ತಿದ್ದರು. ಇದೆಲ್ಲಾ ಗೊತ್ತಿದ್ದ ಸಾತೆಮ್ಮ ಅವರನ್ನು ಏನೂ ಕೇಳದೆ ಎಲ್ಲರಿಗೂ ಊಟ ಮಾಡಿಸಿ ಕಳುಹಿಸುತ್ತಿತ್ತು. ಇದರಿಂದಾಗಿಯೇ ಊರಿನವರಿಗೆ ಸಾತೆಮ್ಮ ಎಂದರೆ ತಮ್ಮ ಮನೆಯ ತಾಯಿಯನ್ನೇ ಕಂಡಷ್ಟು ಗೌರವ. ಮಕ್ಕಳನ್ನು ಕಂಡರೆ ಸಾತೆಮ್ಮಗೆ ಇನ್ನಿಲ್ಲದ ಪ್ರಾಣ! ಇವರ ಜಮೀನಿನಲ್ಲಿದ್ದ ಹುಣಸೆ, ನೆಲ್ಲಿಕಾಯಿ, ಸೀಬೆ ಮತ್ತು ಮಾವಿನ ತೋಪಿನಲ್ಲಿ ಕೆಳಗೆ ಬಿದ್ದಿದ್ದ ಹಣ್ಣುಗಳನ್ನು ಆರಿಸಿಕೊಳ್ಳಲು ಬರುತ್ತಿದ್ದ ಮಕ್ಕಳನ್ನು ನೋಡಿ ಅವರೆಲ್ಲರಿಗೂ ಕರೆದು ಮಜ್ಜಿಗೆ ಕೊಟ್ಟು ಕಳುಹಿಸುತ್ತಿತ್ತು. ಗುಡಿಹಳ್ಳಿಯ ಸಜ್ಜನರು ಹೇಳುವಂತೆ, ಸಾತೆಮ್ಮನಿಂದ ಆಜ್ಞೆಯ ರೂಪದ ಒಂದೇ ಒಂದು ದರ್ಪದ ಶಬ್ದವನ್ನು ಊರಿನಲ್ಲಿ ಯಾರೂ ಕೇಳಿರಲಿಲ್ಲ!

ಹಿರಿಯರು ಹೇಳುವಂತೆ, ಹಿಂದೆ ನಮ್ಮೂರಿನಲ್ಲಿ ಶಾಲೆ ಇರಲಿಲ್ಲ. ಹುಡುಗರು ಓದಲು ಅಲ್ಲಿಂದ ಮೂರು ಕಿಲೋಮೀಟರ್ ದೂರದ ಹಳ್ಳಿಗೆ ಹೋಗಬೇಕಾಗಿತ್ತು. ಇದರಿಂದಾಗಿ ಎಷ್ಟೋ ತಂದೆ-ತಾಯಿಗಳು ಮಕ್ಕಳನ್ನು ಓದಲು ಕಳುಹಿಸುತ್ತಿರಲಿಲ್ಲ! ಇದರ ಜೊತೆಗೆ ಆ ಊರಿನಲ್ಲಿ ಗುಡಿಹಳ್ಳಿಯ ಹುಡುಗರನ್ನು ಅವಮಾನಕರವಾಗಿ ನಡೆಸಿಕೊಳ್ಳುತ್ತಿದ್ದರು. ಈ ವಿಚಾರ ತಿಳಿಯುತ್ತಿದ್ದಂತೆ ಸಿಡಿಮಿಡಿಗೊಂಡ ಸಾತೆಮ್ಮ, ಗುಡಿಹಳ್ಳಿಯಲ್ಲಿಯೇ ತಮ್ಮ ಜಮೀನಿನ ಒಂದು ಭಾಗವನ್ನು ಸರ್ಕಾರಕ್ಕೆ ಕೊಟ್ಟು, ಅದರಲ್ಲಿ ಒಂದು ಸಣ್ಣ ಹೆಂಚಿನ ಮನೆ ಕಟ್ಟಿಸಿ ಶಾಲೆ ನಡೆಯಲು ಅವಕಾಶ ಮಾಡಿಕೊಟ್ಟರಂತೆ. ಜೊತೆಗೆ ಪ್ರತಿ ಮನೆಗೂ ಹೋಗಿ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ತಾಕೀತು ಮಾಡಿದರಂತೆ. ಅವರ ಈ ಪ್ರಯತ್ನದಿಂದಾಗಿಯೇ ಗುಡಿಹಳ್ಳಿಯಿಂದ ಹೆಚ್ಚು ವಿದ್ಯಾವಂತರು ಬರುವಂತಾಯಿತು. ಇಂದು ಅದೇ ಶಾಲೆ ದೊಡ್ಡದಾಗಿ ಬೆಳೆದಿದೆ. ಅಲ್ಲಿ ನೂರಾರು ವಿದ್ಯಾರ್ಥಿಗಳು ಓದುವಂತಾಗಿದೆ. ಸಾತೆಮ್ಮನ ಈ ಗುಣವನ್ನು ಗುಡಿಹಳ್ಳಿಯ ಹಿರೀಕರು ಈಗಲೂ ಬೆಳಗ್ಗೆ ಎದ್ದು ದೇವರನ್ನು ಸ್ಮರಿಸಿಕೊಳ್ಳುವಂತೆ ನೆನೆಯುತ್ತಾರೆ.

ಆ ದಿನ ಬಂದೇ ಬಿಟ್ಟಿತು! ಬಾಣದಂತೆ ಬಂದೆರಗಿದ ಸಾವು ಸಾತೆಮ್ಮನನ್ನು ಬಲಿ ತೆಗೆದುಕೊಂಡಿತು. ಈ ಸಾವು ಅವರ ಮನೆಯನ್ನೂ ಜೊತೆಗೆ ಗುಡಿಹಳ್ಳಿಯನ್ನೂ ದುಃಖಭರಿತ ರಾಗದಲ್ಲಿ ಮುಳುಗಿಸಿತು. ಸಾತೆಮ್ಮನ ಜೊತೆಯಲ್ಲಿಯೇ ಉಳಿದೆಲ್ಲವೂ ಹೊರಟುಹೋದವು. ಆ ಮನೆಯ ಹತ್ತಾರು ಎಕರೆ ಜಮೀನು ಈಗ ಗಾಯಗೊಂಡ ಯುದ್ಧಭೂಮಿಯಂತೆ ಕಾಣುತ್ತಿದೆ. ಹಲವರ ಅವಿವೇಕದ ನಡೆಯಿಂದ ಅವರ ಅವಿಭಕ್ತ ಕುಟುಂಬದ ಸೌಂದರ್ಯದ ಕನ್ನಡಿ ಒಡೆದು ಚೂರಾಗಿದೆ. ಅವರಿದ್ದ ದೊಡ್ಡಮನೆ ಈಗ ಪಾಳುಬಿದ್ದಿದೆ. ಬಾಗಿಲು, ಕಿಟಕಿಗಳೆಲ್ಲ ಮಳೆಗಾಳಿಗೆ ಸಿಕ್ಕಿ, ಬಾಯಿ ಬಿಟ್ಟು ಕೂಂಡಿವೆ. ಮನೆಯ ಮುಂಭಾಗದಲ್ಲಿ ಯಾವಾಗಲೂ ಮಜ್ಜಿಗೆಯಿಂದ ತುಂಬಿರುತ್ತಿದ್ದ ಮಣ್ಣಿನ ಸ್ವಾರೆ ಒಡೆದು ಚೂರಾಗಿದೆ. ಬಂದವರಿಗೆಲ್ಲಾ ಅನ್ನ ಬೇಯಿಸುತ್ತಿದ್ದ ಒಲೆ ಮುಚ್ಚಿಹೋಗಿ ಏಸೋ ದಿನಗಳಾಗಿವೆ. ಆ ಮನೆಯಲ್ಲಿ ಇದ್ದವರೆಲ್ಲ, ಮೂಗುರಿ ಕೊಳ್ಳುರಿ ಹರಿದ ಎತ್ತುಗಳು ದಿಕ್ಕಾಪಾಲಾಗುವಂತೆ, ಈಗ ಯಾವು ಯಾವುದೋ ಊರಿನಲ್ಲಿ ನೆಲೆ ಕಂಡಿದ್ದಾರೆ. ವರ್ಷೊಂಬತ್ತು ಕಾಲವೂ ತುಂಬಿರುತ್ತಿದ್ದ ಬಾವಿ ಕಲ್ಲುಗಳು ಕುಸಿದುಬಿದ್ದು, ಕಲ್ಲುಪೊಟರೆಗಳ ನಡುವೆ ಮುಳ್ಳುಕಂಟಿಗಳೆದ್ದಿವೆ. ಬಾವಿ ಯಾರನ್ನೂ ಗುರುತು ಹಿಡಿಯಲಾರದಷ್ಟು ಶಿಥಿಲವಾಗಿದೆ. ಬಾವಿಯ ಪಶ್ಚಿಮಕ್ಕಿದ್ದ ಕಟ್ಟೆಬಸಪ್ಪನ ಗುಡಿ ಈಗ ಅನಾಥವಾಗಿದೆ. ಹೊಲಗಳಲ್ಲಿ ಸೀಮೆ ಜಾಲಿ ಬೆಳೆದು ಅವರ ಜಮೀನೆಲ್ಲ ಈಗ ಮರುಭೂಮಿಯಂತೆ ಪಾಳು ಬಿದ್ದಿದೆ. ಏನು ಕಾರಣವೋ ಏನೋ, ನಂಬುವುದಕ್ಕೆ ಸಾಧ್ಯವಿಲ್ಲದಂತೆ ಬಡತನ ಹಾಗೂ ಕ್ರಿಯಾಶೂನ್ಯತೆ